ಆ) ನಿಗಧಿ ಪಡಿಸಿರುವ ಮೊತ್ತ ಕಟ್ಟಲು ರೈತರಿಗೆ ದುಬಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಪ್ರಸ್ತುತ ಅನಧಿಕೃತ ನೀರಾವರಿ ಪಂಪು ಸೆಟ್ಟು ಸ್ಥಾವರಗಳನ್ನು ನಿಮ್ಮದೇ ಆದ ಸ್ವಂತ ಟ್ರಾನ್ಸ್‌ಫಾರ್ಮರನ್ನು ಹೊಂದಿ (ಓವೈಟಿ) ಯೋಜನೆಯಡಿ ಸಕ್ರಮೀಕರಣಗೊಳಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಸಕ್ರಮೀಕರಣಕ್ಕಾಗಿ ನಿಗಧಿಪಡಿಸಿರುವ ಶುಲ್ಕ ಪ್ರತಿಯೊಂದು ಅನಧಿಕೃತ ನೀರಾವರಿ ಪಂಪುಸೆಟ್ಟಿಗೆ ರೂ 25,000/–

ಆ) ಹಲವಾರು ಸಂದರ್ಭಗಳಲ್ಲಿ ಈ ವಿಷಯವನ್ನು ಜನಪ್ರತಿನಿಧಿಗಳು ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಓವೈಟಿ ಯೋಜನೆಯಡಿ ಅನಧಿಕೃತ ನೀರಾವರಿ ಪಂಪು ಸೆಟ್ಟುಗಳ ಸಕ್ರಮೀಕರಣಕ್ಕೆ ರೈತರಿಂದ ಬಹಳ ನೀರಸ ಪ್ರತಿಕ್ರಿಯೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣಕ್ಕೆ ಓವೈಟಿ ಯೋಜನೆಗೆ ಬದಲಾಗಿ ಇನ್ನೊಂದು ಹೊಸ ಪ್ರಸ್ತಾವನೆಯು ಈಗ ಸರ್ಕಾರದ ಪರಿಶೀಲನೆಯಲ್ಲಿದೆ.

702(1161) ಶ್ರೀ ಭರಮಗೌಡ (ರಾಜು) ಆಲಗೌಡ ಕಾಗೆ (ಕಾಗವಾಡ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಪಿ.ಟಿ.ಸಿ.ಎಲ್. ನಿಗಮದಿಂದ ದಿನಾಂಕ 31–3–2001 ರಿಂದ 01–03–2003 ರವರೆಗೆ, 10 ಅಶ್ವಶಕ್ತಿ ಉಪಯೋಗಿಸುತ್ತಿರುವ ರೈತರಿಗೆ ವಿದ್ಯುತ್ ಬಿಲ್ಲನ್ನು ಮನ್ನಾ ಮಾಡಲಾಗಿದೆಯೇ;

ಆ) ಸಹಕಾರಿ ಸಂಘಗಳನ್ನು ಮಾಡಿಕೊಂಡು 10 ಅಶ್ವಶಕ್ತಿಗಿಂತ ಹೆಚ್ಚಾಗಿ ವಿದ್ಯುತ್‌ನ್ನು ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಂಘದ ಸದಸ್ಯರುಗಳು ಅತಿ ಸಣ್ಣ ರೈತರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 10 ಅಶ್ವಶಕ್ತಿಗಿಂತ ಹೆಚ್ಚು ವಿದ್ಯುತ್ ಬಳಸುತ್ತಿರುವ ಸಹಕಾರ ಸಂಘಗಳಿಗೆ ವಿದ್ಯುತ್ ಮನ್ನಾ ಮಾಡುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು. ಸರ್ಕಾರದ ದಿನಾಂಕ 21–02–2004ರ ಆದೇಶದನ್ವಯ 10 ಅಶ್ವಶಕ್ತಿವರೆಗಿನ ನೀರಾವರಿ ಪಂಪುಸೆಟ್ಟುಗಳನ್ನು ಹೊಂದಿರುವ ರೈತರ ದಿನಾಂಕ 31–03–2003ರ ಅಂತ್ಯದವರೆಗಿನ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಲಾಗಿದೆ.

ಆ) ರಾಜ್ಯದಲ್ಲಿ ಸಹಕಾರಿ ಸಂಘಗಳನ್ನು ಮಾಡಿಕೊಂಡು ಸಾಮೂಹಿಕ ಏತ ನೀರಾವರಿ ಯೋಜನೆಗಳನ್ನು ರೈತರು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಅದರಲ್ಲಿಯೂ ವಿಶೇಷವಾಗಿ ಬೆಳಗಾವಿ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಇಂತಹ ಸಹಕಾರಿ ಸಂಘಗಳ ಸಂಖ್ಯೆಗಳು ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ಇಂತಹ ಸಹಕಾರಿ ಸಂಘಗಳು, ಸಣ್ಣ ರೈತರುಗಳು ಮಾಡಿಕೊಂಡಿರುವ ಸಹಕಾರಿ ಸಂಘಗಳಾಗಿರುತ್ತವೆ.

ಇ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.